## <u>ವಿಕಲಚೇತನರ ರಿಯಾಯಿತಿ  ಬಸ್ ಪಾಸ್</u>:

ಸರ್ಕಾರದ ನಿರ್ದೇಶನದಂತೆ ಅಂಗವಿಕಲರ ರಿಯಾಯಿತಿ ಬಸ್ ಸಂಖ್ಯೆಗೆ ಯಾವುದೇ ಗರಿಷ್ಠ ಮಿತಿಯನ್ನು ಸೂಚಿಸದೇ ಬಸ್ ಪಾಸ್ ಕೋರಿ ಅರ್ಜಿ ಸಲ್ಲಿಸುವ ಎಲ್ಲಾ ಅಂಗವಿಕಲ ಫಲಾನುಭವಿಗಳಗೂ ಬಸ್ ಪಾಸ್ ವಿತರಿಸಲಾಗುತ್ತಿದೆ. ಸದರಿ ರಿಯಾಯಿತಿಯನ್ನು ಶೇ.40 ರಷ್ಟು ದೈಹಿಕ ಅಂಗವಿಕಲತೆಯುಳ್ಳ ವಿಕಲಚೇತನರಿಗೆ ರಿಯಾಯಿತಿ ಬಸ್ ಪಾಸುಗಳನ್ನು ಸಂಸ್ಥೆಯ ವತಿಯಿಂದಲೇ ನೇರವಾಗಿ ವಿತರಿಸಲಾಗುತ್ತಿದೆ. ಸದರಿ ಪಾಸುಗಳನ್ನು ಪಡೆದ ವಿಕಲಚೇತನರು ತಮ್ಮ ವಾಸಸ್ಥಳದಿಂದ 100 ಕಿ.ಮೀ ಪರಿಧಿಯಲ್ಲಿ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ಪ್ರಸ್ತುತ ವಿಕಲಚೇತನರ ರಿಯಾಯಿತಿ ಬಸ್ ಪಾಸ್ ದರ ರೂ.660.00 ಇರುತ್ತದೆ. ಸದರಿ ಹೊಸ ಪಾಸುಗಳನ್ನು ಪ್ರತಿ ವರ್ಷ ಜನೇವರಿ ದಿಂದ ಡಿಸೆಂಬರ್ ವರೆಗೆ ವಿತರಿಸಲಾಗುತ್ತಿದೆ. ನಂತರದ ವರ್ಷ ಹಳೆಯ ಫಲಾನುಭವಿಗಳು ಜನೆವರಿ, ಫೆಬ್ರುವರಿ ತಿಂಗಳುಗಳಲ್ಲಿ ನವೀಕರಿಸಿಕೊಳ್ಳಲು  ಅವಕಾಶ ಕಲ್ಪಿಸಲಾಗಿದೆ.

**ವೈದ್ಯಕೀಯ ಪ್ರಮಾಣ ಪತ್ರ ಪಡೆಯುವ ಪ್ರಾಧಿಕಾರಗಳ ವಿವರ ಈ ಕೆಳಗಿನಂತಿವೆ.**

a) **ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿಗಳನ್ನೊಳಗೊಂಡ ಏಕಸದಸ್ಯ.**

b) **ತಾಲೂಕು ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿಗಳು, ಸಂಬಂಧಪಟ್ಟ ತಜ್ಞರು ಹಾಗೂ ಫಿಜಿಷಿಯನ್‌ರನ್ನೊಳಗೊಂಡ ಬಹುಸದಸ್ಯ.**

c) **ಜಿಲ್ಲಾ ಆಸ್ಪತ್ರೆಯ ಅಧೀಕ್ಷಕರು, ವೈಧ್ಯಕೀಯ ಮಾಹಾವಿದ್ಯಾಲಯ ಆಸ್ಪತ್ರೆ ಮುಖ್ಯಸ್ಥರು, ಸಂಭಂಧಪಟ್ಟ ತಜ್ಞರು ಹಾಗೂ ಫಿಜಿಷಿಯನ್‌ರನ್ನೊಳಗೊಂಡ ಬಹುಸದಸ್ಯ ಹಾಗೂ ಬೆಂಗಳೂರು ವೈದ್ಯಕೀಯ ಪ್ರಾಧಿಕಾರ.**

ಮೇಲ್ಕಂಡ ಯಾವುದಾದರು ಒಂದು ಪ್ರಾಧಿಕಾರಿಗಳಿಂದ ಗುರುತಿಸಲ್ಪಟ್ಟ ವಿಕಲಚೇತನರಿಗೆ **ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಯ ಸಹಿ ಹಾಗೂ ಮೊಹರಿನೊಡನೆ ಇಲಾಖೆಯಿಂದ(ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ) ಒದಗಿಸುತ್ತಿರುವ ವಿಕಲಚೇತನರ ಗುರುತಿನ ಚೀಟಿಯನ್ನು ಹಾಜರುಪಡಿಸಿದ** ಹಾಗೂ ಅಂಗವಿಕಲ ವ್ಯಕ್ತಿಗಳ ಅಧಿನಿಯಮ-1995 ಕಲಂ 2(ಐ) ರಲ್ಲಿ 7 ವಿವಿಧ ಅಂಗವಿಕಲತೆ ಅಂದರೆ **1)ಅಂಧತ್ವ 2)ಮಂದದೃಷ್ಟಿ 3)ಕುಷ್ಟರೋಗ ನಿವಾರಿತರಾದ 4) ಶ್ರವಣದೋಷವುಳ್ಳವರು 5) ಚಲನವಲನ ಅಂಗವಿಕಲತೆ 6) ಬುದ್ಧಿಮಾಂದ್ಯತೆ 7) ಮಾನಸಿಕ ಅಸ್ವಸ್ಥತೆ ಇರುವವರಿಗೆ ಅಂಗವಿಕಲ ಅಧಿನಿಯಮ ಅನುಸಾರ ಶೇ.40 ಮತ್ತು ಅದಕ್ಕಿಂತ ಹೆಚ್ಚು ಪ್ರಮಾಣದ ಅಂಗವಿಕಲತೆ ಹೊಂದಿರುವ ಮೇಲ್ಕಂಡ ಎಲ್ಲಾ 7 ವಿಧದ ವಿಕಲಚೇತನರಿಗೆ ಮಾತ್ರ** ಸಂಸ್ಥೆಯ ವತಿಯಿಂದ ಪರಿಶೀಲನೆಯ ತರುವಾಯ ನೇರವಾಗಿ ರಿಯಾಯಿತಿ ಬಸ್ ಪಾಸ್‌ನ್ನು ವಿತರಿಸಲಾಗುವುದು.